ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಇತರೆ ರಾಜ್ಯಗಳ ಸುದ್ದಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 24/12/2019

## ಜೆಎಂಎಂ ಮೈತ್ರಿಗೆ ಬಹುಮತ | ಬಿಜೆಪಿಗೆ ಮುಖಭಂಗ

# ಕೈ ಹಿಡಿದ ಜಾರ್ಖಂಡ್

ರಾಂಚಿ: ಬಿಹಾರದಿಂದ ಒಡೆದು ರೂಪುಗೊಂಡ 19 ವರ್ಷದ ಅವಧಿಯಲ್ಲಿ 6 ಮುಖ್ಯಮಂತ್ರಿಗಳು ಹಾಗೂ ಮೂರು ಬಾರಿ ರಾಷ್ಟ್ರಪತಿ ಆಡಳಿತ ಕಂಡಿರುವ ರಾಜಕೀಯ ವಿಪ್ಲವಗಳ ತವರೂರು ಜಾರ್ಖಂಡ್‌ನಲ್ಲಿ ಆಡಳಿತಾರೂಢ ಬಿಜೆಪಿ ಜಾರಿಬಿದ್ದಿದ್ದು, ಜನತೆ ಕಾಂಗ್ರೆಸ್ ಹಾಗೂ ಜಾರ್ಖಂಡ್ ಮುಕ್ತಿ ಮೋರ್ಚಾದ (ಜೆಎಂಎಂ) ಕೈಹಿಡಿದಿದ್ದಾರೆ. ಈ ವಿಧಾನಸಭೆ ಚುನಾವಣೆಯ ಸೋಲಿನೊಂದಿಗೆ ಬಿಜೆಪಿ ಕಳೆದೊಂದು ವರ್ಷದ ಅವಧಿಯಲ್ಲಿ ಐದನೇ ರಾಜ್ಯವನ್ನು ಕಳೆದುಕೊಂಡಂತಾಗಿದೆ. ತಮಿಳುನಾಡು ಮಾದರಿಯಲ್ಲಿ ಪ್ರತಿ ಚುನಾವಣೆಯಲ್ಲೂ ಒಂದೊಂದು ಪಕ್ಷಗಳ ಕೈಹಿಡಿಯುವ ಇತಿಹಾಸ ಮರುಕಳಿಸಿದೆಯಾದರೂ ಬಿಜೆಪಿ ಸೋಲಿನ ಹಿಂದೆ ಆಡಳಿತ ವಿರೋಧಿ ಅಲೆ ಇರುವುದು ಖಚಿತವಾಗಿದೆ.

ಒಟ್ಟು 81 ಕ್ಷೇತ್ರಗಳ ಪೈಕಿ ಜೆಎಂಎಂ, ಕಾಂಗ್ರೆಸ್, ಆರ್‌ಜೆಡಿ ಒಳಗೊಂಡ ಮೈತ್ರಿಕೂಟ 47 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿ ಸ್ಪಷ್ಟ ಬಹುಮತದ ಗೆರೆ ದಾಟಿದರೆ ಬಿಜೆಪಿ 25 ಕ್ಷೇತ್ರಗಳಲ್ಲಷ್ಟೇ ಗೆದ್ದಿದೆ. ಮೈತ್ರಿ ನಾಯಕ ಜೆಎಂಎಂ ಮುಖ್ಯಸ್ಥ ಹೇಮಂತ್ ಸೊರೇನ್ ಸಿಎಂ ಆಗುವುದು ಖಚಿತವಾಗಿದೆ. ಜೆಎಂಎಂ 30 ಕ್ಷೇತ್ರಗಳಲ್ಲಿ ಗೆದ್ದು ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದರೆ ಅದರ ಮೈತ್ರಿ ಪಕ್ಷ ಕಾಂಗ್ರೆಸ್ 16, ಆರ್‌ಜೆಡಿ 1ರಲ್ಲಿ ಜಯ ಸಾಧಿಸಿವೆ. ಉಳಿದಂತೆ 9 ಕ್ಷೇತ್ರಗಳಲ್ಲಿ ಇತರ ಪಕ್ಷಗಳು ಹಾಗೂ ಪಕ್ಷೇತರರು ಜಯಗಳಿಸಿದ್ದಾರೆ.

ಫಲಿತಾಂಶ ಬೆನ್ನಲ್ಲೇ ರಾಜ್ಯಪಾಲರನ್ನು ಭೇಟಿಯಾಗಿ ರಾಜೀನಾಮೆ ಸಲ್ಲಿಸಿದ ಸಿಎಂ ರಘುವರ್ ದಾಸ್ 'ಇದು ನನ್ನ ಸೋಲೇ ಹೊರತು ಬಿಜೆಪಿ ಸೋಲಲ್ಲ' ಎಂದಿದ್ದಾರೆ.

ಜಾರ್ಖಂಡ್‌ನ ಹೊಸ ಯುಗ ಪ್ರಾರಂಭವಾಗಿದೆ. ಜನವರ ಏಳ್ಗೆ, ಆರೋಗ್ಯ, ಉತ್ತಮ ಶಿಕ್ಷಣ ನಮ್ಮ ಮುಖ್ಯ ಗುರಿ.

| ಹೇಮಂತ್ ಸೊರೇನ್ ಜೆಎಂಎಂ ನಾಯಕ

## ಬಿಜೆಪಿ ಕೈತಪ್ಪಿದ 5ನೇ ರಾಜ್ಯ

ಜಾರ್ಖಂಡ್ ಫಲಿತಾಂಶ ಬಿಜೆಪಿಯನ್ನು ಆತಂಕಕ್ಕೆ ದೂಡಿದೆ. ಕಾಂಗ್ರೆಸ್‌ಮುಕ್ತ ಭಾರತ ನಿರ್ಮಾಣದ ಕನಸು ಕಂಡಿದ್ದ ಬಿಜೆಪಿಗೆ ಜಾರ್ಖಂಡ್ ಸೋಲಿನಿಂದಾಗಿ ಒಂದೇ ವರ್ಷದಲ್ಲಿ 5 ರಾಜ್ಯಗಳು ಕೈತಪ್ಪಿದಂತಾಗಿದೆ. ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸ್‌ಗಢ, ಮಹಾರಾಷ್ಟ್ರದಲ್ಲಿ ಈಗಾಗಲೇ ಬಿಜೆಪಿ ಅಧಿಕಾರ ಕಳೆದುಕೊಂಡಿದೆ.



ಫಲಿತಾಂಶ ಬಳಿಕ ರಾಂಚಿಯಲ್ಲಿ ಜೆಎಂಎಂ ಕಾರ್ಯಾಧ್ಯಕ್ಷ ಹೇಮಂತ್ ಸೊರೇನ್ ಸುದ್ದಿಗೋಷ್ಠಿ.

### ಜಾರ್ಖಂಡ್ ಫಲಿತಾಂಶ

| ಪಕ್ಷಗಳು | 2014 | 2019 |
| --- | --- | --- |
| ಬಿಜೆಪಿ | 37 | 25 |
| ಜೆಎಂಎಂ+ ಕಾಂಗ್ರೆಸ್+ಆರ್‌ಜೆಡಿ | 25 | 47 |
| ಎಜೆಎಸ್‌ಯು | 5 | 2 |
| ಜೆವಿಎಂ | 8 | 3 |
| ಇತರ | 6 | 4 |
| ಒಟ್ಟು ಸ್ಥಾನ | | 81 |
| ಸರಳ ಬಹುಮತ | | 41 |

### ಕಾಣದ ಅಚ್ಚರಿಗಳು...

- 19 ವರ್ಷದಲ್ಲಿ ಜಾರ್ಖಂಡ್ 6 ಸಿಎಂಗಳನ್ನು ಕಂಡಿದೆ, ಈವರೆಗೆ ಯಾವುದೇ ಮುಖ್ಯಮಂತ್ರಿಗಳು 2 ಬಾರಿ ಗೆದ್ದಿಲ್ಲ
- ಜಾರ್ಖಂಡ್‌ನ 14 ವರ್ಷದ ಅಸ್ಥಿರತೆಯಲ್ಲಿ 5 ವರ್ಷ ಅಧಿಕಾರ ಪೂರೈಸಿದ ಜಾರ್ಖಂಡ್ ಮೊದಲ ಸಿಎಂ ರಘುವರ್ ದಾಸ್
- 3 ಸಲ ರಾಷ್ಟ್ರಪತಿ ಆಡಳಿತ, ರಾಜಕೀಯ ವಿಪ್ಲವ ಕಂಡಿರುವ ಖ್ಯಾತಿ

### ಬಿಜೆಪಿ ಸೋಲಿಗೆ ಕಾರಣ

- ಸ್ಥಳೀಯ ಸಮಸ್ಯೆಗಳನ್ನು ಬಿಟ್ಟು ಅಯೋಧ್ಯೆ ತೀರ್ಪು, ಪೌರತ್ವ ತಿದ್ದುಪಡಿ ಕಾಯ್ದೆಯನ್ನೇ ಪ್ರಚಾರ ಸಾಧನವಾಗಿ ಬಳಸಿದ್ದು
- ಅಮಿತ್ ಷಾ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಹುದ್ದೆಯಲ್ಲಿ ಹೆಚ್ಚು ಸಕ್ರಿಯವಾಗಿರದೇ ಗೃಹ ಸಚಿವ ಸ್ಥಾನದ ಕೆಲಸಗಳಲ್ಲಿ ಹೆಚ್ಚು ತೊಡಗಿಸಿಕೊಂಡಿದ್ದು
- ರಾಜ್ಯದ ಮತದಾರ ಸ್ಥಳೀಯವಾಗಿ ಜಾತಿ ಆಧಾರಿತ ಮತದಾನ ಮಾಡಿದ್ದು
- ಜಾರ್ಖಂಡ್‌ನಲ್ಲಿ ಮತಾಂತರ ವಿರೋಧಿ ಕಾಯ್ದೆ ಜಾರಿಗೊಳಿಸಿದ್ದು, ಆಡಳಿತ ವಿರೋಧಿ ಅಲೆ, ಸ್ಥಿರ ಸರ್ಕಾರಕ್ಕೆ ಮಣೆ

### ಮೈತ್ರಿಕೂಟ ಗೆದ್ದಿದ್ದೇಗೆ?

- ಪ್ರಾದೇಶಿಕ ಪಕ್ಷವಾದ ಜೆಎಂಎಂಗೆ ಜನತೆ ಹತ್ತಿರವಾಗಿದ್ದು, ಸತತ ಸೋಲಿನ ಬಳಿಕ ಎಚ್ಚೆತ್ತು ಸಂಘಟನೆ ಬಲಪಡಿಸಿದ್ದು
- ಬಿಜೆಪಿ ಟೀಕಿಸುವ ಜತೆಯಲ್ಲೇ ಸಮಸ್ಯೆಗಳನ್ನು ಎತ್ತಿಹಿಡಿದಿದ್ದು, ಸರ್ಕಾರದ ವೈಫಲ್ಯವನ್ನು ಜನರಿಗೆ ಮುಟ್ಟಿಸುವಲ್ಲಿ ಯಶಸ್ವಿಯಾಗಿದ್ದು

7